ಸಾಕ್ಷಿಗೆ ಇಂದು ದಿನಾಂಕ 19-06-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಿಂದ**

1. ಪ್ರತಿವಾದಿ ನಂ.1 ಇವರಿಗೆ ಇಬ್ಬರು ಹೆಂಡತಿಯರು ಮೊದಲನೇ ಹೆಂಡತಿ ಅನ್ನಪೂರ್ಣಾ ಮತ್ತು ಎರಡನೇ ಹೆಂಡತಿ ಚನ್ನಬಸಮ್ಮ ಎಂದರೆ ಸರಿ. ಅನ್ನಪೂರ್ಣಾ ಇವರಿಗೆ ಮೂರು ಮಕ್ಕಳು ಎಂದರೆ ಸರಿ. ಚನ್ನಬಸಮ್ಮ ಇವರಿಗೆ ಇಬ್ಬರು ಮಕ್ಕಳು ಎಂದರೆ ಸರಿ. ನನ್ನ ತಂದೆಯವರು ಚನ್ನಬಸಮ್ಮರವರಿಗೆ ಗುಪ್ತವಾಗಿ ಮದುವೆ ಮಾಡಿಕೊಂಡಿದ್ದರು.2006 ಕ್ಕಿಂತ ಪೂರ್ವದಲ್ಲಿ ನನ್ನ ತಾಯಿ ಸರಿ ಇಲ್ಲ ಎಂದು ನನ್ನ ತಂದೆಯವರು ಚನ್ನಬಸಮ್ಮರವರಿಗೆ ಮದುವೆ ಮಾಡಿಕೊಂಡರು ಎಂದರೆ ಸರಿಯಲ್ಲ. ನನ್ನ ತಾಯಿ ಅನ್ನಪೂರ್ಣಮ್ಮ ರವರು ನನ್ನ ತಂದೆಯವರ ಜೊತೆ ಸದಾ ಜಗಳ ಮಾಡುವುದು, ಕಿರಿಕಿರಿ ಮಾಡುವುದು, ಅಡುಗೆ ಮಾಡದೇ ಇರುವುದು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸುಮಾರು 20-25 ವರ್ಷಗಳಿಂದ ನನ್ನ ತಾಯಿ ಅನ್ನಪೂರ್ಣಮ್ಮ ರವರು ನನ್ನ ತಂದೆಯವರ ಜೊತೆ ವಾಸವಾಗಿಲ್ಲ ಎಂದರೆ ಸರಿ.
2. ಸರ್ವೇ ನಂ.8 ಮತ್ತು 13 ನಿಪಿ-1 ಮತ್ತು 2 ಪಹಣಿಯಲ್ಲಿ ವಾದಿಯರ ಹೆಸರಲ್ಲಿ ಜಂಟಿ ಪಹಣಿ ಇದೆ ಎಂದರೆ ಸರಿ. ಸರ್ವೇ ನಂ.8 ಮತ್ತು 113 ನಿಪಿ-1 ಮತ್ತು 2 ಪಹಣಿಯಲ್ಲಿ ತೋರಿಸಿದ ಆಸ್ತಿಗಳನ್ನು ನನ್ನ ತಂದೆಯವರು ವಾದಿಯರಿಗೆ ಭಾಗದ ರೂಪದಲ್ಲಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಆಸ್ತಿಯನ್ನು ವಾದಿಯರ ಜೀವನಾಂಶಕ್ಕಾಗಿ ನೀಡಲಾಗಿತ್ತು ಎಂದು ನುಡಿಯುತ್ತಾರೆ. ಸರ್ವೇ ನಂ.8 ಮತ್ತು 13 ನಿಪಿ-1 ಮತ್ತು 2 ಪಹಣಿಯಲ್ಲಿ ವಾದಿಯರಿಗೆ ಜೀವನಾಂಶಕ್ಕಾಗಿ ನೀಡಲಾಗಿತ್ತು ಎಂದು ನಮೂದು ಇಲ್ಲ ಎಂದರೆ ಸರಿ. ಸರ್ವೇ ನಂ.8 ಮತ್ತು 113 ನಿಪಿ-1 ಮತ್ತು 2 ಪಹಣಿಯಲ್ಲಿ ವಿಭಾಗದ ರೂಪದಲ್ಲಿ ದಿಃ 13-06-2006 ರಲ್ಲಿ ಕೊಡಲಾಗಿದೆ ಅಂತಾ ನಮೂದು ಇದೆ ಎಂದರೆ ಸರಿ.
3. ನನ್ನ ತಂದೆಗೆ ಒಟ್ಟು ಆಸ್ತಿ 5 ಎಕರೆ 4 ಗುಂಟೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಒಟ್ಟು ಆಸ್ತಿ 5 ಎಕರೆ 10 ಗುಂಟೆ ಇದೆ. ನಾನು ಸಲ್ಲಿಸಿದ ದಾಖಲೆಗಳ ಪ್ರಕಾರ ನನ್ನ ತಂದೆಗೆ ಒಟ್ಟು ಆಸ್ತಿ 5 ಎಕರೆ 4 ಗುಂಟೆ ಇದೆ ಎಂದರೆ ಸರಿ. ನನ್ನ ತಂದೆಗೆ ಒಟ್ಟು ಆಸ್ತಿ 5 ಎಕರೆ 10 ಗುಂಟೆ ಇದೆ ಅಂತಾ ನಾನು

ದಾಖಲೆಗಳನ್ನು ಸಲ್ಲಿಸಿಲ್ಲ ಎಂದರೆ ಸರಿ. ಮೊದಲು ಪಗಡದಿನ್ನಿ ಗ್ರಾಮದ 10 x 20 ಮನೆಯನ್ನು ಬಾಡಿಗೆ ಕೊಡಲಾಗಿತ್ತು, ಈಗ ಬಾಡಿಗೆದಾರರು ಇಲ್ಲ. ಸದರಿ ರೂ.300/- ಬಾಡಿಗೆಯನ್ನು ನನ್ನ ತಾಯಿ ಪಡೆಯುತ್ತಿದ್ದಳು ಎಂದರೆ ಸರಿ. ಸರ್ವೇ ನಂ.8 ಮತ್ತು 113 ನಿಪಿ-1 ಮತ್ತು 2 ಪಹಣಿಯಲ್ಲಿ ತೋರಿಸಿದ ಮತ್ತು ಪಗಡದಿನ್ನಿ ಗ್ರಾಮದ 10 x 20 ಮನೆ ನನ್ನ ಸ್ವಾಧೀನದಲ್ಲಿ ಇದೆ. ಮೊದಲು ಮೇಲೆ ಹೇಳಿದ ಮನೆ ಇರಲಿಲ್ಲ, ನನ್ನ ತಂದೆ ಮಲ್ಲಿಕಾರ್ಜುನರವರು ಖಾಲಿ ನಿವೇಶನ ವಾದಿಯರಿಗೆ ಕೊಟ್ಟಿದ್ದರು. ಅದರ ಮೇಲೆ ನಾವು ಹಣ ರೂ.2-3 ಲಕ್ಷ ಖರ್ಚು ಮಾಡಿ 15 ವರ್ಷಗಳ ಹಿಂದೆ ಮನೆ ಕಟ್ಟಿದ್ದೇವೆ.

4. ಪಗಡದಿನ್ನಿ ಗ್ರಾಮದ 10x20 ಮನೆಯನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಪ್ರತಿವಾದಿ ನಂ.2 ಚನ್ನಬಸಮ್ಮ ಪಾಲುವಿಭಾಗ ಕೋರಿ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಪ್ರತಿವಾದಿ ನಂ.1 ರವರು ಪಲ್ಲವಿ ಮತ್ತು ಪೂಜಾರವರಿಗೆ 2 ಎಕರೆ ಜಮೀನು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-6 ಮತ್ತು 9 ರಾಜಿ ಡಿಕ್ರಿಯಲ್ಲಿ ಪ್ರತಿವಾದಿ ನಂ.1 ರವರು ಪಲ್ಲವಿ ಮತ್ತು ಪೂಜಾರವರಿಗೆ 2 ಎಕರೆ ಜಮೀನು ಕೊಟ್ಟಿರುತ್ತಾರೆ ಎಂದು ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.1 ರವರಿಗೆ ಬಂದ ಭಾಗದಲ್ಲಿ ಪಲ್ಲವಿ ಮತ್ತು ಪೂಜಾರವರಿಗೆ 2 ಎಕರೆ ಜಮೀನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಪ್ರಕಾರ ಪ್ರತಿವಾದಿ ನಂ.2 ಚನ್ನಬಸಮ್ಮರವರಿಗೆ ನನ್ನ ತಂದೆಯವರು ಆಸ್ತಿ ಕೊಟ್ಟ ಬಗ್ಗೆ ನನಗೆ ಮಾಹಿತಿ ಇದೆ.

5. ಬಿ ಶೆಡ್ಯೂಲ್ ಮನೆ ಪ್ರತಿವಾದಿ ನಂ.1 ರವರ ಹೆಸರಲ್ಲಿ ಇದೆ ಅಂತಾ ನಾನು ಯಾವುದೇ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಯರಿಗೆ 2 ಎಕರೆ ಜಂಟಿಯಾಗಿದೆ, ಪ್ರತಿವಾದಿ ನಂ.1 ಇವರಿಗೆ 1 ಎಕರೆ 4 ಗುಂಟೆ ಇದೆ, ಪ್ರತಿವಾದಿ ನಂ.3 ಮತ್ತು 4 ಇವರ ಹೆಸರಲ್ಲಿ ಜಂಟಿಯಾಗಿದೆ, ಕಾರಣ ಪ್ರತಿವಾದಿ ನಂ.1 ರವರು ವಾದಿ ಮತ್ತು ಪ್ರತಿವಾದಿಯರ ಮಧ್ಯೆ ಸಮವಾಗಿ ಆಸ್ತಿ ಹಂಚಿಕೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ರವರು ತಮ್ಮ ಹೆಸರಲ್ಲಿ ಇದ್ದ ಆಸ್ತಿಯನ್ನು ಪ್ರತಿವಾದಿ ನಂ.3 ಮತ್ತು 4 ಇವರಿಗೆ 2 ಎಕರೆ ಕೊಟ್ಟು 1 ಎಕರೆ 4 ಗುಂಟೆ ತಮ್ಮಲ್ಲಿ ಉಳಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

6. ದಾವಾ ಆಸ್ತಿಯಲ್ಲಿ ಈಗಾಗಲೇ ವಾದಿಯರು ತಮ್ಮ ಹಕ್ಕು ಮತ್ತು ಹಿಸ್ಸೆ ಪಡೆದುಕೊಂಡಿದ್ದರಿಂದ ನನಗೆ ಪುನಃ ಪಾಲು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ಹಂಚಿಕೆ ಮಾಡಲಾದ ಆಸ್ತಿಯನ್ನು ಪ್ರತಿವಾದಿಯರಿಗೆ ಕೊಟ್ಟಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ವಾದಿಯರಿಗೆ ಕೊಟ್ಟ ಆಸ್ತಿ ಕೇವಲ ಜೀವನಾಂಶಕ್ಕಾಗಿ ಕೊಟ್ಟ ಆಸ್ತಿ ಇದ್ದು ನಮಗೆ ದಾವಾ ಆಸ್ತಿಯಲ್ಲಿ ಸಮ ಪಾಲು ಬರಬೇಕು ಎಂದು ನುಡಿಯುತ್ತಾರೆ. ವಾದಿಯರಿಗೆ ಕೊಟ್ಟ ಆಸ್ತಿ ಕೇವಲ ಜೀವನಾಂಶಕ್ಕಾಗಿ ಕೊಟ್ಟ ಆಸ್ತಿ ಇದೆ ಅಂತಾ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ.8 ಮತ್ತು 113 ನಿಪಿ-1 ಮತ್ತು 2 ಪಹಣಿಯಲ್ಲಿ ತೋರಿಸಿದ ಆಸ್ತಿಗಳನ್ನು ವಾದಿಯರು ಭಾಗದ ರೂಪದಲ್ಲಿ ಪಡೆದುಕೊಂಡಿದ್ದರು ಸಹ ವಾದಿಯರಿಗೆ ಕೊಟ್ಟ ಆಸ್ತಿ ಕೇವಲ ಜೀವನಾಂಶಕ್ಕಾಗಿ ಕೊಟ್ಟ ಆಸ್ತಿ ಅಂತಾ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂ.8 ಮತ್ತು 113 ನಿಪಿ-1 ಮತ್ತು 2 ಪಹಣಿಯಲ್ಲಿ ತೋರಿಸಿದ ಆಸ್ತಿಗಳನ್ನು ವಾದಿಯರು ಭಾಗದ ರೂಪದಲ್ಲಿ ಪಡೆದುಕೊಂಡ ನಂತರ ನಾವು ಬ್ಯಾಂಕಿನಲ್ಲಿ ಸಾಲ ಪಡೆದಿದ್ದೇವೆ ಎಂದರೆ ಸರಿಯಲ್ಲ. ಸರ್ವೇ ನಂ.8 ಮತ್ತು 113 ನಿಪಿ-1 ಮತ್ತು 2 ಪಹಣಿಯಲ್ಲಿ ತೋರಿಸಿದ ಆಸ್ತಿಗಳನ್ನು ವಾದಿಯರು ಭಾಗದ ರೂಪದಲ್ಲಿ ಪಡೆದುಕೊಂಡ ನಂತರ ನಾವು ವಿರುಪನಗೌಡರ ಬಳಿ ಒತ್ತೆ ಇಟ್ಟು ಅವರ ಬಳಿ ಸಾಲ ಪಡೆದಿದ್ದೇವೆ ಎಂದರೆ ಸರಿಯಲ್ಲ.

7. ವಾದಿಯರು 2006 ರಲ್ಲಿ ಸರ್ವೇ ನಂ.8 ಮತ್ತು 113 ನಿಪಿ-1 ಮತ್ತು 2 ಪಹಣಿಯಲ್ಲಿ ತೋರಿಸಿದ ಆಸ್ತಿಗಳನ್ನು ವಾದಿಯರು ಭಾಗದ ರೂಪದಲ್ಲಿ ಪಡೆದುಕೊಂಡ ನಂತರ 2017 ರವರೆಗೆ ಮೌನವಾಗಿದ್ದರಿಂದ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ವೇಳೆಯಲ್ಲಿ ನಾವು ಸಣ್ಣವರಿದ್ದೇವು ಅದಕ್ಕಾಗಿ ದಾವೆ ಹಾಕಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.1 ರವರು ವಾದಿಯರಿಗೆ ಆಸ್ತಿ ಕೊಟ್ಟಾಗ ನಾವು ಸಣ್ಣವರಿದ್ದೆವು ಅಂದರೆ ಸದರಿ ಆಸ್ತಿಯನ್ನು ಜೀವನಾಂಶ ರೂಪದಲ್ಲಿ ನಮಗೆ ಕೊಡಲಾಗಿದೆ ಎಂದು ನುಡಿಯುತ್ತಾರೆ.

8. ವಾದಿಯರು 2006 ರಲ್ಲಿ ಸರ್ವೇ ನಂ.8 ಮತ್ತು 113 ನಿಪಿ-1 ಮತ್ತು 2 ಪಹಣಿಯಲ್ಲಿ ತೋರಿಸಿದ ಆಸ್ತಿಗಳನ್ನು ನನ್ನ ತಾಯಿ ಮತ್ತು ಹಿರಿಯರ ಸಮಕ್ಷಮ ಭಾಗದ ರೂಪದಲ್ಲಿ ನನ್ನ ತಾಯಿಗೆ

ಪ್ರತಿವಾದಿ ನಂ.1 ರವರು ಕೊಟ್ಟ ನಂತರವು ಕೂಡಾ ನಾನು ವಯಸ್ಕನಾದ ಮೇಲೆ ಪುನಃ 2017 ರಲ್ಲಿ ಪ್ರಸ್ತುತ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ವಯಸ್ಕನಾದ 4 ವರ್ಷಗಳ ನಂತರ ಬೇರೆಯವರ ಮಾತು ಕೇಳಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ರವರ ಎರಡನೇ ಹೆಂಡತಿ ಮಕ್ಕಳಿಗೂ ಕೂಡಾ ದಾವಾ ಆಸ್ತಿಯಲ್ಲಿ ಹಕ್ಕು ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರತಿವಾದಿ ನಂ.1 ರವರು ಕೊಡಬಹುದು ಇಲ್ಲವಾದರೆ ಬಿಡಬಹುದು ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಇದೆ

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು